


### ಜಾಗೃತಿ ಮೂಡಿಸುವ ಲೇಖನ

ಕ್ರೆಡಿಟ್ ಕಾರ್ಡ್ ಸದ್ಬಳಕೆ ಹೇಗೆ? (ಸುಧಾ, ಫೆ.12) ಮುಖಪುಟ ಲೇಖನ (ಜೋಮನ್ ವರ್ಗೀಸ್) ಅತ್ಯಂತ ಮೌಲಿಕವಾಗಿದ್ದು, ಕ್ರೆಡಿಟ್ ಕಾರ್ಡ್ ಬಳಸುವವರಿಗೆ ಒಂದು ಎಚ್ಚರಿಕೆಯ ಪಾಠವಾಗಿದೆ. ಅನುಕೂಲ, ಅನಾನುಕೂಲಗಳ ಬಗ್ಗೆ ಉದಾಹರಣೆಗಳ ಸಹಿತ ಲೇಖಕರು ವಿವರಿಸಿದ್ದಾರೆ.

–ಬಿ.ಎನ್. ಜ್ವಾಲನಪ್ಪ, ಚಿಕ್ಕಮಗಳೂರು, ಹೇಮಾ ಮುರುಳಿ ಹೊಸಗ್ರಹಾರ, ಟಿ.ಪಿ. ಸುಭಾಷಿಣಿ, ಮೈಸೂರು, ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು, ವೈ.ಜಿ. ನರಸಿಂಹನ್, ಸು.ವಿಜಯಲಕ್ಷ್ಮಿ, ಶಿವಮೊಗ್ಗ, ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

### ಚಿಂತನೆಗೆ ಗ್ರಾಸ

‘ಅಂತರ್‌ಧರ್ಮೀಯ ಸಂಸತ್ತು’ (ಮೂಚಿ) ವಿಚಾರಲಹರಿ ಲೇಖನ ಚಿಂತನಾರ್ಹ.

–ಪ್ರದೀಪ್ ಎನ್. ಚೆಲುವರಸನಕೊಪ್ಪಲು, ಲಕ್ಷ್ಮೀಕಾಂತ, ಮಂಗಳೂರು

### ಕೊರವಂಜಿಯ ಆರ್.ಕೆ. ಲಕ್ಷ್ಮಣ್

ರಾಜಕೀಯದ ಅತಿ ಮಾನವರನ್ನು ಶ್ರೀಸಾಮಾನ್ಯನ ದೃಷ್ಟಿಗೆ ತಾಗುವಂತೆ ಚಿತ್ರಿಸಿದ ‘ವ್ಯಂಗ್ಯ ಚಿತ್ರ ಗಾರುಡಿಗ’ (ಪ್ರಕಾಶ್ ಶೆಟ್ಟಿ ಲೇಖನ) ಕೊರವಂಜಿ ಖ್ಯಾತಿ ಆರ್.ಕೆ. ಲಕ್ಷ್ಮಣ್ ಅವರು ಕನಸಿನಲ್ಲಿ ಮಿಂಚಿ ಹೋದಂತಾಯಿತು.

–ರಾಜಶೇಖರ ಹಾದಿಮನಿ, ಧಾರವಾಡ, ಅಮೃತೇಶ್ವರ ತಂಡರ, ಅಣ್ಣಿಗೇರಿ, ಮುಕುಂದ ಹೆರಕಲ್ಲ, ಕಲಬುರಗಿ, ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

### ವಿಶೇಷ ಏನಿಲ್ಲ

ಆರ್.ಕೆ. ಲಕ್ಷ್ಮಣ್ ಲೇಖನದಲ್ಲಿ ‘ಎನ್ನಡ ಹುಡುಗನಿಗೆ ಕನ್ನಡ ಅಂದರೆ ಅಷ್ಟಕಷ್ಟೆ. ಕೊರವಂಜಿಯಲ್ಲಿ ಚಿತ್ರ ಬಂದಿದ್ದನ್ನು ಯಾರಿಗೂ ಹೇಳಬಯಸದೆ...’ ಎಂದಿದೆ. ಲೇಖಕರು ಇದಕ್ಕೆ ಯಾವ ಆಧಾರ ಒದಗಿಸಬಲ್ಲರು? ಎಂ. ಭಕ್ತವತ್ಸಲ ‘ಅವರು ಬೆಂಗಳೂರಿಗೆ ಬಂದಾಗ ಕನ್ನಡದಲ್ಲೇ ಮಾತಾಡಲು ಇಷ್ಟಪಡುತ್ತಿದ್ದರು’ ಎಂದಿದ್ದಾರೆ. ಇನ್ನೊಬ್ಬ ವ್ಯಂಗ್ಯಚಿತ್ರಕಾರರು (ಜೇಮ್ಸ್‌ವಾಜ್)‘ಪುಣೆಯಲ್ಲಿ ಒಂದು ಶಿಬಿರ ಏರ್ಪಡಿಸಿದಾಗ ನನ್ನೊಂದಿಗೆ ಕನ್ನಡದಲ್ಲೇ ಮಾತನಾಡಿದರು’ ಎಂದು ಬರೆದಿದ್ದಾರೆ. ಲಕ್ಷ್ಮಣ್ ಮೈಸೂರಿನವರು; ಬೆಂಗಳೂರಿನವರಲ್ಲ. ಎನ್ನಡ ಕನ್ನಡ ಪ್ರಾಸಬದ್ಧ ನಿಜ. ಆದರೆ ಆರ್.ಕೆ. ಸೋದರರಿಗೆ ಮೈಸೂರಿನ ಬಗ್ಗೆ ಕರ್ನಾಟಕದ ಜನ–ಸಂಸ್ಕೃತಿಗಳ ಬಗ್ಗೆ ಸಾಕಷ್ಟು ಅಭಿಮಾನ ಇತ್ತು.

–ಎಚ್.ಎಸ್. ಮಂಜುನಾಥ, ಬೆಂಗಳೂರು

### ಕಥೆ ಚೆನ್ನಾಗಿತ್ತು

‘ಎಲ್ಲರ ಮಾಲಿಕ’ ಕಥೆ (ಪಿ.ಬಿ. ಪ್ರಸನ್ನ) ಕಥೆ ಚೆನ್ನಾಗಿತ್ತು. ಇಂತಹ ಸಾಮರಸ್ಯದ ಕಥೆಗಳು ಇನ್ನಷ್ಟು ಬರಲಿ.

–ಬಿ.ಎ. ಅಜರುದ್ದೀನ್ ಬಾಚಹಳ್ಳಿ, ಸುಂದರ್ ಬೆಂಗಳೂರು, ಮಹಾವೀರ ಕಾಸರ ಶಿವಮೊಗ್ಗ

### ಸಾಕಷ್ಟು ಮಾಹಿತಿ ನೀಡಿತು

‘ಮಗುವಿಗೆ ಆಟಿಸಂ ಸಮಸ್ಯೆ ಇದೆಯೇ? ಆರೋಗ್ಯ ಲೇಖನ (ಜಿ.ಎಸ್. ಸತೀಶ್, ಹೊಸಕೆರೆ) ಸಾಕಷ್ಟು ಮಾಹಿತಿ ನೀಡಿತು.

–ಪುಟ್ಟಗೌರಿ ಚಿದಾನಂದ, ಕಲಬುರಗಿ

### ಔದುಂಬರ ಅಲ್ಲ..

ಔಷಧೀಯ ಸಸ್ಯ ಔದುಂಬರ (ರಮಣ ಶೆಟ್ಟಿ ರೆಂಜಾಳ) ಲೇಖನದಲ್ಲಿದ್ದಂತೆ ಅತ್ತಿ ಮತ್ತು ಅಂಜೂರ ಎರಡೂ ಒಂದೇ ಅಲ್ಲ. ಇವರೆಡೂ ಮಾರೇಸಿಯೇ ಎಂಬ ಸಸ್ಯವರ್ಗಕ್ಕೆ ಸೇರಿದೆ. ಆದರೆ ವೈಜ್ಞಾನಿಕ ಹೆಸರು ಬೇರೆ ಬೇರೆ. ಅತ್ತಿಯ ವೈಜ್ಞಾನಿಕ ಹೆಸರು ಫೈಕಸ್ ರೆಸಿಮೊಸ, ಅಂಜೂರದ ವೈಜ್ಞಾನಿಕ ಹೆಸರು ಫೈಕಸ್ ಕಾರಿಕ.

– ಡಾ. ಶ್ವೇತಲಕ್ಷ್ಮಿ, ಕುಕ್ಕೆ ಸುಬ್ರಹ್ಮಣ್ಯ

### ಅರ್ಥಪೂರ್ಣ

ಸೆಲೆಬ್ರಿಟಿ ಅಂಕಣದಲ್ಲಿ ‘ಸಾವಿರ ದಾಟಿದ ರಾಜ’ –ಖ್ಯಾತ ಸಂಗೀತ ನಿರ್ದೇಶಕ ಇಳೆಯರಾಜ ಅವರ ಕುರಿತ ಲೇಖನ ಅರ್ಥಪೂರ್ಣ.

–ಎಸ್. ಪ್ರಭಾ, ಬೆಂಗಳೂರು

### ಮಾತುಗಳು ಹಿಡಿಸಿದವು

‘ಎಡ ಬಲ ಪಂಥ ಏನಿಲ್ಲ; ಮಾನವೀಯತೆಯೇ ಎಲ್ಲ..’ ಡಾ. ಸಿದ್ಧಲಿಂಗಯ್ಯ ಸಂದರ್ಶನ (ರಾಘವೇಂದ್ರ ತೊಗರ್ಸಿ, ಫೆ.5ರ ಸಂಚಿಕೆ) ದಲ್ಲಿ ಅವರ ಅಂತರಂಗದ ಮಾತುಗಳು ಹಿಡಿಸಿದವು.

– ಪುಟ್ಟಗೌರಿ ಕಲಬುರಗಿ, ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಸುಶಾಂತ ಗಬಡಿ, ತೀರ್ಥಹಳ್ಳಿ

